2) ಜೂಟು ರೇಷ್ಮೆ ಗಿರಣಿ, ಚನ್ನಪಟ್ಟಣ(455) ಮತ್ತು ರೇಷ್ಮೆ ನೂಲು ತೆಗೆಯುವ ಘಟಕ, ಕನಕಪುರ(260) ಒಟ್ಟು 715 ಕಾರ್ಮಿಕರಿಗೆ ಸ್ವಯಂ ನಿವೃತ್ತಿ ನೀಡುವ ರೂ. 17.50 ಕೋಟಿಗಳನ್ನು ಮಂಜೂರು ಮಾಡುವುದು.

3) ಟಿ.ನರಸೀಪುರ ಹಾಗೂ ಮೈಸೂರು ಘಟಕಗಳನ್ನು ನಡೆಸಲು ರೂ. 7.50ಕೋಟಿಗಳ ದುಡಿಯು ಬಂಡವಾಳವನ್ನು ಹೆಚ್ಚಿಸಲು ಸರ್ಕಾರದ ಭರವಸೆ ಕೊಡುವುದು ಒಂದು ವೇಳೆ ಬೇರೆ ಕಾರಣಗಳಿಂದ ಸರ್ಕಾರ ಭರವಸೆ ಕೊಡಲು ಸಾಧ್ಯವಾದಿದಲ್ಲಿ ರೂ.7.50 ಕೋಟಿಗಳ ನೇರ ಹಣಕಾಸಿನ ಸಹಾಯವನ್ನು ಕೆ.ಎಸ್.ಐ.ಸಿ.ಗೆ ದುಡಿಯುವ ಬಂಡವಾಳಕ್ಕಾಗಿ ಸರ್ಕಾರವೇ ಒದಗಿಸುವುದು.

4) ನಿಗಮದಿಂದ ಸರ್ಕಾರಕ್ಕೆ ಬಾಕಿ ಇರುವ ರೂ. 22.91 ಕೋಟಿಗಳ ಸಾಲವನ್ನು ಶೇರು (ಈಕ್ವಿಟಿ) ಬಂಡವಾಳವನ್ನು ಮಾರ್ಪಾಟು ಮಾಡಿ ನಿವ್ವಳ ಮೌಲ್ಯವನ್ನು ಸಕಾರಾತ್ಮಕ ವಾಗಿಸುವುದು.

ಕೆ.ಎಸ್.ಎಂ.ಬಿ

1) ಬೆಲೆ ಸ್ಥಿರೀಕರಣಕ್ಕಾಗಿ ಮಾರುಕಟ್ಟೆಯಲ್ಲಿ ಮಧ್ಯ ಪ್ರವೇಶ ಮಾಡಿ ರೇಷ್ಮೆ ನೂಲನ್ನು ಖರೀದಿಸಿ ಮಾರಾಟ ಮಾಡುವುದಕ್ಕೆ ಚಟುವಟಿಕೆಗಳಿಗೆ ಹಾಲಿ ಇರುವಂತೆ ಸರ್ಕಾರದಿಂದ ಯಾವುದೇ ಅನುದಾನ ಅಥವಾ ಸಹಾಯ ಅನುದಾನವನ್ನು ನೀಡುವ ಪದ್ಧತಿ ಇರುವುದಿಲ್ಲ. ಬೆಲೆಸ್ಥಿರೀಕರಣ ಪ್ರಕ್ರಿಯೆಯಲ್ಲಿ ಈಗಿನ ಪರಿಸ್ಥಿತಿಯಲ್ಲಿ ಕೆಲವೊಂದು ಸಂಧರ್ಭಗಳಲ್ಲಿ ಉಂಟಾಗುವ ನಷ್ಟವನ್ನು ಭರಿಸಿ ತನ್ನ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸುವುದಕ್ಕಾಗಿ ಸಂಸ್ಥೆಗೆ ಆ ರೀತಿ ಉಂಟಾದ ನಷ್ಟವನ್ನು ಸರ್ಕಾರದಿಂದ ಬೆಲೆ ಸಹಯ ಅನುದಾನ ರೂಪದಲ್ಲಿ ನೀಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

443(741) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ (ಪರಸಗಡಿ) ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಖಾತೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಳಗಾವಿ ಜಿಲ್ಲೆಯಲ್ಲಿನ ಒಟ್ಟು 28.09 ಲಕ್ಷ ಜಾನುವಾರುಗಳಿಗೆ ಔಷಧಿ ಕೇವಲ 14.00 ಲಕ್ಷ ರೂ.ಗಳ ಅನುದಾನವನ್ನು ಬಿಡುಗಡೆ ಮಾಡಿರುವುದರಿಂದ ಪ್ರತಿ ಜಾನುವರಿಗೆ 0.50 ರೂ. ಅನ್ನು ಒದಗಿಸಿದಂತಾಗಿರುವುದರಿಂದ ಜಾನುವಾರುಗಳಿಗೆ ಸಮರ್ಪಕ ಚಿಕಿತ್ಸೆ ಒದಗಿಸುವಲ್ಲಿ ಆಡಚಣೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬೆಳಗಾವಿ ಜಿಲ್ಲೆಯಲ್ಲಿ ಜಾನುವಾರುಗಳ ಚಿಕಿತ್ಸೆಗೆ ಜಾನುವಾರು ಒಂದಕ್ಕೆ ಕನಿಷ್ಟ 10.00 ರೂ. ಗಳನ್ನಾದರೂ ಬಿಡುಗಡೆ ಮಾಡಲಾಗುವುದೇ?

ಮಿರಾಜುದ್ದೀನ್ ಎನ್. ಪಾಟೀಲ್ (ಪಶುಸಂಗೋಪನೆ ಮತ್ತು ವಕ್ಫ್ ಖಾತೆ ಸಚಿವರು):

ಅ) ಬಂದಿದೆ.

ಆ) ವಂಟನ ಲಭ್ಯತೆ ಅನುಗುಣವಾಗಿ ಬಿಡುಗಡೆ ಮಾಡಲಾಗುತಿದೆ.

444(742) ಶ್ರೀ ಮಾಮನಿ ವಿಶ್ವನಾಥ ಕರುಬಸಪ್ಪ(ಪರಾಸಗಡ) ಮಾನ್ಯ ರೇಷ್ಮೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಸವದತ್ತಿ ತಾಲ್ಲೂಕಿನ ರೇಷ್ಮೆ ಇಲಾಖೆಯ 29 ಎಕರೆಯುಳ್ಳ ಬೃಹತ್ ಫಾರಂ ಹೌಸ್‌ನಲ್ಲಿ ಕೆಲಸ ಮಾಡುತ್ತಿರುವ ನೌಕರರು ಸರಿಯಾದ ನೀರಾವರಿ ವ್ಯವಸ್ಥೆ ಇಲ್ಲದ ಕಾರಣ ಅಲ್ಲಿನ ಸವಲತ್ತುಗಳ ದುರುಪಯೋಗ ವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?